ಕಾಣುವ ಪಕ್ಷಿ ಲಾಂಗ್ ಟೈಲ್ಡ್ ಬ್ರೋಡ್ಬಿಲ್. ಕಡು ಅರಿಶಿನದ ಮುಖದ ಸುಂದರ. ಅಯ್ಯೋ ಪಾಪ ಎನ್ನುವಂತೆ ಅದರ ಮುಖಭಾವ. ಇಲ್ಲಿದ್ದ ಪತಿ–ಪತ್ನಿಯರ ನಡುವೆ ಗೂಡು ಮೂಡಿಸುವ ವಿಷಯದಲ್ಲಿ ಬಹಳ ಅನ್ಯೋನ್ಯತೆ ಇದ್ದಂತೆ ಕಂಡಿತು. ಒಂದು ಹಕ್ಕಿ ಗೂಡು ಕಟ್ಟುವ ಸಾಮಗ್ರಿಯನ್ನು ಹೊರಗಿನಿಂದ ತಂದುಕೊಟ್ಟರೆ ಮತ್ತೊಂದು ಅದನ್ನು ಗೂಡಿನೊಳಗೆ ಎಳೆದುಕೊಂಡು ಹೋಗಿ ನೀಟಾಗಿ ಜೋಡಿಸುತ್ತಿತ್ತು. ಗೂಡು ಕಟ್ಟುವ ವಿಷಯದಲ್ಲಿ ಅನೇಕ ಪಕ್ಷಿಗಳು ವಹಿಸುವ ಶ್ರದ್ಧೆ, ಏಕಾಗ್ರತೆ ಮತ್ತು ಕುಶಲತೆಗಳು ಬೆರಗು ಹುಟ್ಟಿಸುತ್ತವೆ. ಈ ಪಕ್ಷಿಗಳ ಗಾತ್ರಕ್ಕೆ ಹೋಲಿಸಿದರೆ ಅವುಗಳು ಕಟ್ಟುತ್ತಿದ್ದ ಗೂಡು ಮೂವತ್ತು ಪಟ್ಟು ದೊಡ್ಡದಾಗಿತ್ತು. ಅಷ್ಟು ದೊಡ್ಡ ಗೂಡಿನ ಅಗತ್ಯ ಅವಕ್ಕೆ ಖಂಡಿತಾ ಇದೆಯೇ? ಇದ್ದರೂ ಅದರ ಉಪಯೋಗಗಳೇನು? ಎಂಬುದು ನಮಗೆ ಸುಲಭಕ್ಕೆ ತಿಳಿಯದ ವಿಚಾರ.

ನಿರಂತರವಾಗಿ ಸುರಿಯುವ ಮಳೆಯಲ್ಲಿ ಅವುಗಳ ಗೂಡು ಪದೇಪದೇ ತೊಪ್ಪೆ ಆಗುತ್ತಿತ್ತು. ಬೀಸುವ ಗಾಳಿಗೆ ಅಲ್ಲಾಡಿ ಗೂಡಿಗೆ ಸುತ್ತಿದ ಅನೇಕ ಗರಿಗಳು ಎಗರಿ ಹೋಗುತ್ತಿದ್ದವು. ಸ್ವಯಂ ಪಕ್ಷಿಗಳೂ ಕೂಡ ನೆಂದು ಮುದ್ದೆಯಾಗಿದ್ದವು. ಇದ್ಯಾವುದನ್ನು ಲೆಕ್ಕಿಸದ ಹಕ್ಕಿಗಳು ಸುಲಭಕ್ಕೆ ಸೋಲುವಂತೆ ಕಾಣುತ್ತಿರಲಿಲ್ಲ. ಇವು ಮೊಟ್ಟೆ ಇಟ್ಟು ಮರಿ ಮಾಡಲು ಇನ್ನೂ ಇಪ್ಪತ್ತು ದಿನ ಬಾಕಿ ಇತ್ತು. ಒಂದು ಪಕ್ಷಿ ಗೂಡು ಕಟ್ಟಲು ಆರಂಭಿಸಿ, ಮೊಟ್ಟೆ ಇಟ್ಟು ಮರಿ ಮಾಡಿ, ಮರಿಗಳಿಗೆ ಊಟವಿತ್ತು, ಕೊನೆಯಲ್ಲಿ ಬದುಕುವ ಶಿಕ್ಷಣ ಕಲಿಸುವ ಎಲ್ಲಾ ಹಂತಗಳನ್ನು ಸುದೀರ್ಘವಾಗಿ ಕುಳಿತು ನೋಡುವ ಬಯಕೆ ಹಲವು ದಿನಗಳಿಂದ ಇದ್ದೇ ಇದೆ. ಆದರೆ ಈ ಆಸೆ ಈ ಜನ್ಮದಲ್ಲಿ ಈಡೇರುವುದು ಕಷ್ಟ. ಪಕ್ಷಿಯ ಬದುಕನ್ನು ಸಮಗ್ರವಾಗಿ ಅರಿತು ಬರೆಯಬೇಕಾದರೆ ಇಂಥದ್ದೊಂದು ತಪ, ಧ್ಯಾನ, ಸಾಮೀಪ್ಯ ಮಾಡಿದರೆ ಒಳ್ಳೆಯದು.

ಸಂಗೀತಾಳ ಪೂಫು ಅಂದರೆ ಅವಳತ್ತೆ ಅಡುಗೆಯಲ್ಲಿ ಬಹಳ ನೈಪುಣ್ಯತೆ ಹೊಂದಿದ್ದವಳು. ರುಚಿಕಟ್ಟಾಗಿ ಸ್ಥಳೀಯ ಅಡುಗೆ ಮಾಡಿ ಪ್ರೀತಿಯಿಂದ ಬಡಿಸಿದಳು. ನಮ್ಮ ಊರು, ಮನೆ, ಮಕ್ಕಳು, ಈ ವಿವರಗಳನ್ನೆಲ್ಲ ಆಕೆ ದೂರದ ನೆಂಟಳಂತೆ ವಿಚಾರಿಸಿಕೊಂಡಳು. ರಾತ್ರಿಯಾಗುತ್ತಲೇ ಚಳಿ ತನ್ನಿಂತಾನೆ ತನ್ನ ವೇಗ ಹೆಚ್ಚಿಸಿಕೊಂಡಿತು. ಇದಕ್ಕೆ ಮಳೆ– ಗಾಳಿ ಕೂಡ ಸಾಥ್ ಕೊಟ್ಟವು. ಬೆಳಗ್ಗೆ ಬೇಗನೆದ್ದು ಒಂದು ಹೊಸ ಸಾಹಸಕ್ಕೆ ಹೊರಡಬೇಕಿತ್ತು.

ನಾಳಿನ ಪಕ್ಷಿ ಬೇಟೆ ಕೊಂಚ ಸವಾಲಿನ ಸನ್ನಿವೇಶ ಸೃಷ್ಟಿಸಿತ್ತು. ನಾವಿದ್ದ ಪರ್ವತದ ನೆತ್ತಿಯಿಂದ ಸೀದಾ ಕೆಳಗಿದ್ದ ಕಣಿವೆಗೆ ಇಳಿದು ಹೋಗಬೇಕಿತ್ತು. ಇಲ್ಲಿನ ದಾರಿ ಅಷ್ಟು ಸಲೀಸಲ್ಲ. ಕಡಿದಾದ ಬಂಡೆಗಳನ್ನು ಹಿಡಿದುಕೊಂಡು ಪ್ರಪಾತದ ಕಡೆಗೆ ಇಳಿಯಬೇಕಿತ್ತು. ನಾವೆಲ್ಲ ಬಲು ಉತ್ಸಾಹದಿಂದ 'ಇದೆಲ್ಲಾ ನಮಗೆ ಅಭ್ಯಾಸ! ನೀವೇನು ಯೋಚಿಸಬೇಡಿ! ನಮ್ಮ ಕ್ಯಾಮೆರಾ ಬ್ಯಾಗು ಮತ್ತು ಟ್ರೈಪಾಡುಗಳನ್ನು ನಾವೇ ಹೊತ್ತುಕೊಂಡು ಇಳಿಯುತ್ತೇವೆ' ಎಂದು ಜಂಬ ಕೊಚ್ಚಿಕೊಂಡೆವು. ಅಲ್ಲಿದ್ದವರೆಲ್ಲಾ ನಮ್ಮ ವೀರ ಪೌರುಷದ ಮಾತು ಕೇಳಿ ಮುಗುಳ್ನಕ್ಕರು. ತುಂಬಾ ಅನುಭವಸ್ಥನಾಗಿದ್ದ ರಂಟೂ ಸಹ 'ಇದು ಖಂಡಿತ ಆಗದ ಮಾತು. ಜಾಗ ಹೊಸದು. ಇಳಿಯುವ ಸ್ಥಳ ತುಂಬಾ ಕಡಿದಾಗಿರುತ್ತದೆ. ಒಂದು ವೇಳೆ ಆಯತಪ್ಪಿ ಬಿದ್ದರೆ ನಿಮಗೂ ಆಪತ್ತು. ನಿಮ್ಮ ಕ್ಯಾಮೆರಾಗಳು ಖಂಡಿತಾ ಪುಡಿಪುಡಿ ಆಗುತ್ತವೆ. ರಿಸ್ಕ್ ತಗೋಳೋದು ಬ್ಯಾಡ. ಉಳಿದಂತೆ ನಿಮ್ಮಿಷ್ಟ ನೋಡಿ' ಎಂದು ಎಚ್ಚರಿಸಿದ.

'ಹಾಗಿದ್ದರೆ ಏನು ಮಾಡುವುದು? ನೀನೇ ಹೇಳಪ್ಪ' ಎಂದು ದೀಪಕ್ ಅಸಹಾಯಕರಂತೆ ಅವನನ್ನೇ ಪ್ರಶ್ನಿಸಿದರು. 'ಸುಮ್ನೆ ಯಾಕೆ ಉಸಾಬರಿ. ಯಾರಾದ್ರೂ ಜನ ಸಿಕ್ರೆ ಸಹಾಯಕ್ಕೆ ಒಳ್ಳೇದಲ್ವಾ? ಎಂದು ಡಾ. ರಾಘವೇಂದ್ರ ಸಲಹೆಯ ದನಿ ಸೇರಿಸಿದರು. ಅಲ್ಲೇ ಕೂತಿದ್ದು ನಮ್ಮ ಮಾತುಗಳನ್ನು ಆಲಿಸುತ್ತಿದ್ದ; ಸರಿಯಾದ ಸಮಯಕ್ಕೆ ಎಂಟ್ರಿ ಕೊಡಲು ಕಾಯುತ್ತಿದ್ದ ಸಂಗೀತಾಳ ಗಂಡ ತನ್ನ ಸಲಹೆ ಬಿಟ್ಟ. 'ನಮ್ಮಲ್ಲಿ ನಿಮ್ಮ ಲಗೇಜ್ ಹೊರುವ ಹುಡುಗರಿದ್ದಾರೆ. ಅವರನ್ನು ಬೇಕಾದರೆ ಬಳಸಿಕೊಳ್ಳಿ. ಅವರಿಗೆ ಒಂದು ದಿನದ ಕೂಲಿ ಫಿಕ್ಸ್ ಇದೆ. ಅಷ್ಟನ್ನು ಕೊಟ್ಟರೆ ಸಾಕು. ಇಡೀ ದಿನ ನಿಮ್ಮ ಜೊತೆಗೇ ಇರುತ್ತಾರೆ. ಅವರಿಗೆ ಆ ದಾರಿಯಲ್ಲಿ ಓಡಾಡಿ ಅಭ್ಯಾಸವಿದೆ. ನಿಮ್ಮ ಬ್ಯಾಗುಗಳು ಹಾಳಾಗದಂತೆ ಜೋಪಾನವಾಗಿ ತೆಗೆದುಕೊಂಡು ಹೋಗಿ ಮತ್ತೆ ತರುತ್ತಾರೆ. ಈ ವಿಷಯದಲ್ಲಿ ಅವರೆಲ್ಲಾ ಪಂಟರ್. ನೀವು ಆಗಲಿ ಎಂದರೆ ಅವರನ್ನು ಕರೆಸುತ್ತೇನೆ. ಹಣದ